ಸ್ಟಾರ್ ಬಕ್ಸ್. ವೆಲ್ಕಮ್ ಟು ಸ್ಟಾರ್ ಬಕ್ಸ್ ಎಂಬ ಗದ್ದಲಕ್ಕೆ ತುಸು ಗಾಬರಿಯಾಗಿ, ತಬ್ಬಿಬ್ಬಾಗಿ, ಜಾಗ ಹಿಡಿದು ಎದುರುಬದುರು ಕೂತರು.

"ನಾನೇ ಆರ್ಡರ್ ಮಾಡಲೇ ನಿಮಗೂ?"

"ಪ್ಲೀಸ್..."

ಆರ್ಡರ್ ಮಾಡಿ ಬಂದು ಅವನ ಮುಂದೆ ಕುಳಿತೆ.

"ಕೊಯ್ದುಕೊಂಡು ಬರುತ್ತಾರೆಯೇ?"

"ಏನನ್ನಾ?"

"ಕಾಫೀ ಬೀಜಾನಾ. ಎಷ್ಟೊತ್ತಾಯ್ತು ಆರ್ಡರ್ ಮಾಡಿ!"

"ನಿಮಗೆ ಒಳ್ಳೆ ಸೆನ್ಸ್ ಆಫ್ ಹ್ಯೂಮರ್."

"ಥ್ಯಾಂಕ್ಸ್, ನಿಮ್ಮ ಹಾಗೇನೇ."

"ಅಂಡ್ ಅ ಕ್ಯೂಟ್ ಸ್ಮೈಲ್."

"ಥ್ಯಾಂಕ್ಸ್ ಅಗೈನ್."

"ಕಾಫಿಗೆ ಕರೀತಾರಾ?"

"ಇಲ್ಲ, ಇಲ್ಲಿಗೇ ತರಲಿಕ್ಕೆ ಹೇಳಿದ್ದೀನಿ."

"ಏನು ಆರ್ಡರ್ ಮಾಡಿದೆ ಅಂಥಾ ಕೇಳಲ್ವೇನ್ರೀ?"

"ಏನಾದ್ರೂ ಓಕೆ. ಇಟ್ಸ್ ಯುವರ್ ಚಾಯ್ಸ್." ನಕ್ಕೆ.

"ನಿಮ್ಮ ಹತ್ರ ಒಂದು ಕೇಳಬಹುದೇ? ತಪ್ಪು ತಿಳೀಕೂಡದು..."

"ಪ್ರಯತ್ನ ಮಾಡ್ತೀನಿ."

"ನನ್ನ ಬಗ್ಗೆ ನಿಮಗೆ ಏನೂ ಗೊತ್ತಿಲ್ಲ. ಆದರೆ ಕಾರಲ್ಲಿ ಕರೆದುಕೊಂಡು ಬಂದು ಕಾಫೀ ಕೊಡಿಸ್ತಾ ಇದ್ದೀರಿ. ನಿಮ್ಮನ್ನ ಒಬ್ಬ ಈಸಿ ಗೋಯಿಂಗ್ ಟೈಪ್ ಅಂತ ಅಂದುಕೋಬಹುದೇ?"

"ನನ್ನ ಮಟ್ಟಿಗೆ ಲೈಫ್ ಈಸ್ ಆ ಗ್ಯಾಂಬಲ್. ಅದೂ ಅಲ್ಲದೆ ಒಂದು ವಿಷಯವನ್ನ ಹೇಗೆ ಡೀಲ್ ಮಾಡಬೇಕನ್ನೋದು ಅವರವರ ಮನಸ್ಸಿನ ಬೆಳವಣಿಗೆಗೆ ತಕ್ಕಂತೆ ಇರುತ್ತೆ ಅಲ್ವಾ?"

"ನನ್ನ ಜಾಗದಲ್ಲಿ ಒಂದು ಹೆಣ್ಣಿದ್ದಿದ್ದರೆ ಹೀಗೆ ಕಾರಲ್ಲಿ ಕರೆದುಕೊಂಡು ಬಂದು ಕಾಫೀ ಕೊಡಿಸ್ತಾ ಇದ್ರಾ?"

"ಐ ಡೋಂಟ್. ಯಾಕ್ರೀ ಹೀಗೊಂದು ಪ್ರಶ್ನೆ? ಈ ಫೋಟೊದಲ್ಲಿ ಇರೋದು ನಾನೇ. ಒಂದು ಆಪರೇಷನ್ ನಂತರ ಹೀಗೆ ಬದಲಾದೆ ಅಂತ ಹೇಳಿ ಬಿಡ್ತೀರಾ?"

ಜೋರಾಗಿ ನಕ್ಕ.

"ಒಂದು ಸೀರಿಯಸ್ ಆದ ಪ್ರಶ್ನೆನಾ ಕಾಮಿಡಿ ಮಾಡಿ ಬಿಟ್ರೀ. ಬೈ ದ ಬೈ ಇದೇ ಪ್ರಶ್ನೆನಾ ನೀವೂ ಕೇಳಬಹುದು. ಒಂಟಿಯಾಗಿ ಬಂದ ಗಂಡಸಿನ ಬಳಿ ಬೆಳಗಾನ್ಬೆಳಗೆ ಕಾಫೀ ಬಗ್ಗೆ ಕ್ಲಾಸ್ ತಗೋತೀರಾಂತಾ.."

"ಕೆಲವು ಪ್ರಶ್ನೆಗಳನ್ನ ಕೇಳದೆ ಇರೋದೆ ಚಂದ. ಚಂದವಾಗೆ ಇರಲಿ ಬಿಡಿ. ಎಲ್ಲಕ್ಕೂ ಕಾರ್ಯ ಕಾರಣ ಕಂಡುಹಿಡಿದರೆ ಲೈಫಲ್ಲಿ ಸ್ವಾರಸ್ಯ ಹೊರಟೋಗುತ್ತೆ, ಅಲ್ವೇ?"

ಪಕ್ಕದ ಟೇಬಲಿನ ನಗುವಿನ ಸದ್ದು ನಮ್ಮ ಸಂಭಾಷಣೆಯನ್ನು ನಿಲ್ಲಿಸಿತು. ಹಬೆಯಾಡುತ್ತಾ ಒಂದು ಕಾಫಿಯೂ, ಉದ್ದನೆಯ ಬೆವರಿದ ಗಾಜಿನ ಲೋಟದಲ್ಲಿ ಮತ್ತೊಂದು ಕಾಫಿಯೂ ಬಂದವು.